ದಕ್ಷಿಣ ಭಾಗದ ಬೀಲಿಹೊರಗಿನಿಂದ ಹೊರಟು ಹಳ್ಳವನ್ನು ದಾಟಿ ದಕ್ಷಿಣಕ್ಕೆ ತಿರುಗಿ ಸರ್ವೆ 112 ಮತ್ತು 114ನೆ ನಂಬರು ಜಮೀನುಗಳ ಪಶ್ಚಿಮ ದಿಕ್ಕಿನ ಸರಹದ್ದಿನಲ್ಲಿ ಬಂದು 116 ಮತ್ತು 118ನೆ ನಂಬರು ಜಮೀನುಗಳನ್ನು ಸುತ್ತಿಕೊಂಡು 118ನೆ ನಂಬರಿನ ನೈರುತ್ಯ ಮೂಲೆಯಲ್ಲಿ ಬಣಿಯನ್ನು ದಾಟಿ ಪಶ್ಚಿಮಕ್ಕೆ ತಿರುಗಿ 563—564—565—585—584—585ನೆ ನಂಬರುಗಳ ಉತ್ತರ ಭಾಗದ ಬೀಲಿಹೊರಕ್ಕೆ ಬಂದು ಆಬ್ಬಳಿ ಇರುವ ಬಣಿಗೆ ಅಡ್ಡಲಾಗಿ ಸರ್ವೆ 609 ಮತ್ತು 611ನೆ ನಂಬರುಗಳ ಪೂರ್ವ ದಿಕ್ಕಿನ ಸರಹದ್ದು ಹೊರಗೆ ಹೋಗಿ ಚಾಮರಾಜನಗರ, ರಾಮಸಮುದ್ರದ ರಸ್ತೆಗೆ ಸೇರುತ್ತದೆ. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ 611—609—601—600 ಮತ್ತು ಚಾಮರಾಜನಗರದ ಸರ್ವೆ 391—390—388—387—386—385—366ನೆ ನಂಬರುಗಳ ಉತ್ತರ ದಿಕ್ಕಿನ ಸರಹದ್ದು ಹೊರಗೆಬಂದು ದಕ್ಷಿಣಕ್ಕೆ ತಿರುಗಿ 366—367ನೆ ನಂಬರುಗಳ ಪಶ್ಚಿಮ ದಿಕ್ಕಿನ ಬೀಲಿ ಮಾರ್ಗವಾಗಿಯೂ ಮತ್ತು 369ನೆ ನಂಬರಿನ ಉತ್ತರ 428ನೆ ನಂಬರಿನ ಪೂರ್ವ ಮತ್ತು ಉತ್ತರ 429ನೆ ನಂಬರಿನ ಉತ್ತರ ಮತ್ತು ಪಶ್ಚಿಮಬೀಲಿ ಮಾರ್ಗವಾಗಿ ಬಂದು ಬಣಿಯನ್ನು ದಾಟಿ 427ನೆ ನಂಬರಿನ ಉತ್ತರ, ಪಶ್ಚಿಮ ಮತ್ತು 433—434ನೆ ನಂಬರಿನ ಪಶ್ಚಿಮದ ಬೀಲಿ ಮಾರ್ಗವಾಗಿ ಹಾಸನೂರುಫೂಟು ರಸ್ತೆಗೆ ಸೇರುತ್ತದೆ. ನಂತರ ಸರ್ವೆ 434—436ನೆ ನಂಬರುಗಳ ರಸ್ತೆಪಕ್ಕದ ಬೀಲಿ ಮಾರ್ಗವಾಗಿ ಮತ್ತು ಸರ್ವೆ 444ನೆ ನಂಬರಿನ ಸದರೀ ಬೀಲಿಯಲ್ಲಿ ಸ್ವಲ್ಪದೂರಕ್ಕೆ ಹೋಗಿ ಹಾಸನೂರುಫೂಟು ರಸ್ತೆಯನ್ನು ದಾಟಿ 458—459 ಮತ್ತು 461ನೆ ನಂಬರುಗಳ ಉತ್ತರದಿಕ್ಕಿನ ಎಲ್ಲೆ ಹೊರಗಡೆಬಂದು 462—463—464 ಮತ್ತು 467ನೆ ನಂಬರುಗಳನ್ನು ಬಳಿಗೊಂಡು ಗುಂಡುಪೇಟೆರಸ್ತೆಗೆ ಸೇರುತ್ತದೆ. ಮುಂದಕ್ಕೆ ಸರ್ವೆ 470ನೆ ನಂಬರಿನ ಪಶ್ಚಿಮ ಸರಹದ್ದು ಹೊರಗೆ ನೈರುತ್ಯ ಮೂಲೆವರೆಗೆ ಬಂದು ಸದರೀ ರಸ್ತೆಯನ್ನು ಫಾಟು 471—472—466ನೆ ನಂಬರುಗಳ ಪೂರ್ವ ದಿಕ್ಕಿನ ಬೀಲಿಹೊರಗೊಂಡು ಪಶ್ಚಿಮಕ್ಕೆ ತಿರುಗಿ 466—473ನೆ ನಂಬರುಗಳ ಉತ್ತರದಿಕ್ಕಿನ ಬೀಲಿ ಮಾರ್ಗವಾಗಿಯೂ 475ನೆ ನಂಬರು ಕೆರೆ ಏರಿಯ ಆಗ್ನೇಯಮೂಲೆಗೆ ಸೇರಿ ಸದರಿ ಕೆರೆ ಪೂರ್ವದಿಕ್ಕಿನ ಏರಿಯನ್ನು ಬಳಿಗೊಂಡು ಸರ್ವೆ 672ನೆ ನಂಬರಿನ ದಕ್ಷಿಣ ಮತ್ತು 672—673ನೆ ನಂಬರುಗಳ ಪೂರ್ವಭಾಗದ ಸರಹದ್ದು ಹೊರಗಡೆಯಿಂದ ಸರ್ವೆ 701—702—703—704—679—705 ಮತ್ತು 706ನೆ ನಂಬರುಗಳನ್ನು ಬಳಿಗೊಂಡು 688 ಮತ್ತು 689ನೆ ನಂಬರುಗಳ ದಕ್ಷಿಣ ಭಾಗದ ಬೀಲಿಯ ಹೊರಗೂ ಮತ್ತು 689—686ನೆ ನಂಬರುಗಳ ಪೂರ್ವಭಾಗದ ಸರಹದ್ದು ಹೊರಗೆಬಂದು 686ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ನಂಜನಗೂಡು, ಹಾಸನೂರುಫೂಟು ರಸ್ತೆಗೆ ಸೇರಿ ಸರ್ವೆ 686—685 ಮತ್ತು 659ನೆ ನಂಬರುಗಳ ಉತ್ತರಭಾಗದ ಎಲ್ಲೆ ಹೊರಗಡೆಹೋಗಿ ಸದರೀ ರಸ್ತೆಯನ್ನು ದಾಟಿ ಪ್ರಾರಂಭಿಸಿದ ಸ್ಥಳಕ್ಕೆ ಅಂದರೆ 23ನೆ ನಂಬರಿನ ಆಗ್ನೇಯ ಮೂಲೆಬಳಿಗೆ ಸೇರುತ್ತದೆ.

ಎಂ. ಕಾಂತರಾಜ ಅರಸ್,
ಡೆಪ್ಯೂಟಿ ಕಮಿಷನರ್.

ಇಸ್ತಿಹಾರ್ನಾಮೆ.

ತಾರೀಖು 8ನೆ ಜನವರಿ 1909.

ಮೈಸೂರು ತಾಲ್ಲೂಕು ವರುಣದ ಹೋಬಳಿಗೆ ಸೇರಿದ ಜೋಡಿ ಹೊಸಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀ ಗೋಸ್ತರವಾಗಿ ಮೈಸೂರು ಸಬ್ ಡಿವೀರ್ಜ ಆಫೀಸಿನಲ್ಲಿ ಸ್ರ 1909ನೆ ಏಪ್ರೆಲ್ ಮೂಹೆ 1ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹೆಚ್ಚಿನ ತಪ್ಶೀಲು ಬಗ್ಯೆ ಸ್ರ 1909ನೆ ಇಸವಿ ಜನವರಿ 14ನೆ ಮಾರ್ಚಿಂ 2ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 18—19ನೆ ಪೇಜು ನೋಡತಕ್ಕದ್ದು.

ಟಿ. ಕೆ. ಸುಂದರರಾಜ್ಯಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

1908ನೆ ಇಸವಿ ಡಿಸೆಂಬರು 5ನೆ ಶನಿವಾರ ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ಮಿಟಿಂಗ್ ಪ್ರೊಸೀಡಿಂಗ್ಸ್ ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗೆತರ ಮೆಂಬರುಗಳು.

1. ಮೆ|| ಕೆ. ಚಾಂಡಿಯವರು, ಡೆಪ್ಯೂಟಿ ಕಮಿಷನರ್ ಮತ್ತು ಪ್ರೆಸಿಡೆಂಟರು.
2. ,, ಕೆ. ಶ್ರೀನಿವಾಸರಾಯರು, ಟ್ರೆಜರಿ ಅಸ್ಸೆಂಟ್ ಕಮಿಷನರ್ ಮತ್ತು ವೈಸ್ ಪ್ರೆಸಿಡೆಂಟರು.
3. ,, ಕೆ. ಶ್ರೀನಿವಾಸರಾಯರು, ಶಿವಮೊಗ್ಗ ಸಬ್ ಡಿವಿರ್ಜ ಇಂಚಾರ್ಜ್ ಅಸಿಸ್ಟೆಂಟ್ ಕಮಿಷನರವರು.
4. ,, ಎಸ್. ಸುಬ್ಬರಾಯರು, ಸಾಗರ ಡಿವಿರ್ಜ ಅಸಿಸ್ಟೆಂಟ್ ಕಮಿಷನರು.
5. ,, ಆರ್. ವಿ. ಸುಂದರಂ ಐಯ್ಯರವರು, ಶಿವಮೊಗ್ಗ ಡಿವಿರ್ಜ ಎಗ್ಜಿಕ್ಯೂಟಿವ್ ಇಂಜನಿಯರವರು.
6. ,, ತಿರುವಲಾಚಾರ್, ಸ್ಕೂಲ್ ಡೆಪ್ಯೂಟಿ ಇನ್ಸ್ಪೆಕ್ಟರು, ಶಿವಮೊಗ್ಗ ಡಿಸ್ಟ್ರಿಕ್ಟ್.

ಉದ್ಯೋಗಸ್ಥರಲ್ಲದ ಮೆಂಬರುಗಳು.

7. ಮಿ|| ನಾಡಿಗ ಶಂಕರಪ್ಪನವರು, ಶಿವಮೊಗ್ಗ.
8. ,, ಉಬ್ರಾಣಿ ಶ್ಯಾನುಭೋಗ ಅಪ್ಪಾಜಪ್ಪನವರು, ಚನ್ನಗಿರಿ.
9. ,, ನಾಡಿಗ ಗೋಪಾಲಪ್ಪನವರು, ಹೊನ್ನಾಳಿ.
10. ,, ಸಾಲೂರಿ ಭವಾನಿರಾಯರು, ಶಿಕಾರಿಪುರ.
11. ,, ನಾಡಿಗ ಭಾಸ್ಕರರಾಯರು, ಸೊರಬ.
12. ,, ಹುಮಚದಕಟ್ಟೆ ರಾಮರಾಯರು, ತೀರ್ಥಹಳ್ಳಿ.
13. ,, ಸಿ. ಸುಬ್ಬರಾಯರು, ಅಡ್ವೋಕೇಟ್, ಶಿವಮೊಗ್ಗ.
14. ,, ಖಾಜಿ ಸೈಯದ್ ಮಹಮ್ಮದ್ ಸಾಹೇಬರು, ಶಿವಮೊಗ್ಗ.
15. ,, ವಾಮನರಾಯರು, ಸಾಹುಕಾರ್, ನಗರ.
16. ,, ಎಂ. ನರಸಿಂಹಯ್ಯಂಗಾರ್ರು, ಸಾಗರ.

ಗೈರ್ ಹಾಜರು.

1. ,, ಮಹಮದ್ ಉಸ್ಮಾನ್ ಸಾಹೇಬರವರು, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
2. ,, ಬರದವಳ್ಳಿ ಗುರಪ್ಪಗೌಡರು, ಸಾಗರ.
3. ,, ಶ್ಯಾಮಣ್ಣ ಉಡುಪರು, ನಗರ.
4. ,, ನಾಡಿಗ ರಾಘವೇಂದ್ರಪ್ಪನವರು, ಕುಂಸಿ ಸಬ್ ತಾಲ್ಲೂಕು.
5. ,, ರೆವರೆಂಡ್ ಎ. ಇ. ನೈಟಂಗೇಲ್, ಶಿವಮೊಗ್ಗ.
6. ,, ರೆವರೆಂಡ್ ಫಾದರ್ ಎಫ್. ಪುಲ್ಲೆಯರು, ಶಿವಮೊಗ್ಗ.
7. ,, ತಾಗರ್ತಿ ದ್ಯಾವಪ್ಪನವರು, ಶಿಕಾರಿಪುರ.
8. ,, ರಟ್ಟಿಹಳ್ಳಿ ಪುಟ್ಟಪ್ಪನವರು, ಸಾಗರ.
9. ,, ದೇವಂಗಿ ರಾವಣ್ಣಗೌಡರು, ತೀರ್ಥಹಳ್ಳಿ.

1. ಡಿಸ್ಟ್ರಿಕ್ಟ್ ಫಂಡಿನ 1908ನೆ ಇಸವಿ ಮಾರ್ಚ್ ತಿಂಗಳಿಂದ ಜೂನ್ ತಿಂಗಳು ವರಿಗಿನ ಆಡಿಟಿಡ್ ಲೆಕ್ಕಗಳು ಬದಲಾಗಿ ರಿಕಾರ್ಡು ಮಾಡಲ್ಪಟ್ಟವು—

		ಜಮಾ.			ಖರ್ಚು.		
		ರೂ.	ಆ.	ಪೈ.	ರೂ.	ಆ.	ಪೈ.
1—3—08ರಲ್ಲಿ ಶಿಲ್ಕು	...	51,255	11	4	...		
ಮಾರ್ಚ್ ಮಾಹೆಕ್ಕೆ	...	11,507	0	8	6,114	7	7
ಏಪ್ರಿಲ್ ಮಾಹೆಕ್ಕೆ	...	6,699	13	0	7,395	5	9
ಮೇ ಮಾಹೆಕ್ಕೆ	...	5,559	2	1	6,885	14	9
ಜೂನ್ ಮಾಹೆಕ್ಕೆ	...	6,956	3	1	27,301	9	11
30—6—08ರಲ್ಲಿ ಶಿಲ್ಕು	...	....			34,680	8	2
ಜುಮ್ಲಾ	...	82,377	14	2	82,377	14	2

2. ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ನಂಬರು 2034—ಲೋ. ಬೋ. 69–08ರ ಮಕ್ರುಂ 1—9—08 ನೊಡನೆ ತಲ್ಪಿದ ಹೊನ್ನಾಳಿ ತಾಲ್ಲೂಕು ಬಸವನಹಳ್ಳಿ ಗ್ರಾಮಸ್ಥರು ತಮ್ಮ ಗ್ರಾಮವನ್ನು ಅರಬಗಟ್ಟೆಯೊಂದಿಗೆ ಸೇರಿಸಿ ಯೂನಿಯರ್ ಮಾಡಿದ್ದು ಅನಾನುಕೂಲವೆಂತ ಬರಕೊಂಡಿರತಕ್ಕ ಅರ್ಜಿಯೂ ಮತ್ತು ಆ ವಿಷಯದಲ್ಲಿ ತಲ್ಪಿದ ಶಿವಮೊಗ್ಗ ಸಬ್ ಡಿವಿಜರ್ ಅಸಿಸ್ಟೆಂಟ್ ಕಮಿಷರ್ಸರವರ ನಂಬರು 844ರ ಮಕ್ರುಂ 11—11—08ನೆ ಯಾದಿಯೂ ಓದಲ್ಪಟ್ಟು, ತಾಲ್ಲೂಕು ಬೋರ್ಡಿನಲ್ಲಿ ನಿರ್ಧರಿಸಿದಂತೆ ಬಂದೇ ಫಿರ್ತಾ ಮತ್ತು ಬಂದೇ ಹೋಬಳಿಗೆ ಸೇರಿರುವ ಅರಬಗಟ್ಟುವನ್ನು ಮತ್ತು ಸಂಗತಕಟ್ಟೆಯನ್ನು ಸೇರಿಸಿ ಬಂದು ಯೂನಿಯರ್ ಆಗಿಯೂ ಮಾಡಬಹುದೆಂತಲೂ, ಬಸವನಹಳ್ಳಿ ಯೂನಿಯರ್ ಅದೇ ಹೋಬಳಿಯಲ್ಲಿರತಕ್ಕ ಮತೊಂದು ಯಾವದಾದರೂ ಗ್ರಾಮವನ್ನು ಸೇರಿಸಿ ಪ್ರತ್ಯೇಕ ಬಂದು ಯೂನಿಯನ್ನಾಗಿ ಯಾತಕ್ಕೆ ಮಾಡಬಾರದೆಂಬ ವಿಷಯದಲ್ಲಿ ತಾಲ್ಲೂಕು ಬೋರ್ಡಿನ ಅಭಿಪ್ರಾಯವನ್ನು ತಿಳಿಯಬೇಕೆಂತ ತೀರ್ಮಾನಿಸಲಾಯಿತು.

3. ಜೋಳದಾಳು-ಬೆಂಕಿಪುರದ ರಸ್ತೆ ಮೇಲೆ ಸಾಯಂಕಾಲದಿಂದ ಪ್ರಾತಃಕಾಲದ ವರಿಗೆ ಸ್ಟೀಂ ವೋಟಾರ್ ವ್ಯಾಗ್ಗ ಬಿಡಕೂಡದೆಂಬ ವಿಷಯದಲ್ಲಿ ಶಿವಮೊಗ್ಗ ಸಬ್ ಡಿವಿಜರ್ ಅಸಿಸ್ಟೆಂಟ್ ಕಮಿಷನರವರ ನಂಬರು 214ರ ಮಕ್ರುಂ 12—11—08ನೆ ಯಾದಿ ತಲ್ಪಿದ್ದು ಓದಲಾಗಿ ರಿಕಾರ್ಡು ಮಾಡಲಾಯಿತು.

4. ಬೆಂಗಳೂರು-ಹೊನ್ನಾವರ ರಸ್ತೆಯಿಂದ ಸಾಗರ ತಾಲ್ಲೂಕು ಹಂಸಾಗರಕ್ಕೆ ಬಂದು ರಸ್ತೆ ಮಾಡಬೇಕೆಂತ ಸದರಿ ಹಂಸಾಗರ ವಾಸಿಗಳ ಅರ್ಜಿಗಳೊಡನೆ ತಲ್ಪಿದ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ನಂಬರು 4429—ಲೋ. ಬೋ. 155–08—2ರ ಮಕ್ರುಂ 12—11—08ನೆ ಡಾಕೆಟ್ ಓದಲಾಗಿ, ಸದರಿ ಗ್ರಾಮಸ್ಥರೇ ಬಂದು ಪಕ್ಕಾ ರಸ್ತೆಯನ್ನು ಮಾಡಿ ಡಿಸ್ಟ್ರಿಕ್ಟ್ ಬೋರ್ಡಿನವರ ಸ್ವಾಧೀನ ಪಡಿಸಿದರೆ ಅದರ ಉಸ್ತುವಾರಿ ನೋಡಿಕೊಳ್ಳುತ್ತೇವೆಂತ ತೀರ್ಮಾನಿಸಲಾಯಿತು.

5. ಶಿವಮೊಗ್ಗದಲ್ಲಿರುವ ಚಾಮರಾಜ ಮೆಮೋರಿಯಲ್ ಹಾಲನ್ನು ಕಟ್ಟಿರುವದಕ್ಕೋಸ್ಕರ ಚಂದಾದಾರರಿಂದ ಬರತಕ್ಕ ಬಾಕಿ ಚಂದಾ ವೊಬಲಗನ್ನು ವಸೂಲು ಮಾಡಿ ಮುಂದೆ ಭರ್ತಿ ಮಾಡಿಕೊಳ್ಳಬೇಕೆಂತಲೂ ಸದ್ಯಕ್ಕೆ ಸದರಿ ಕಂಟ್ರಾಕ್ಟುದಾರರಿಗೆ

ಸಲ್ಲತಕ್ಕ ರೂಪಾಯಿ 2,250 ಶಿವಮೊಗ್ಗ ಮ್ಯುನಿಸಿಪಲ್ ಬೋರ್ಡಿನವರು ಅಡ್ವಾನ್ಸಾಗಿ ಕೊಟ್ಟು ಸದರಿ ಕಟ್ಟಡವನ್ನು ಸ್ವಾಧೀನ ತೆಗದುಕೊಳ್ಳಬೇಕೆಂತಲೂ ತಲ್ಪಿದ ಗವರ್ನಮೆಂಟ್ ಪ್ರೊಸಿಡಿಂಗ್ಸು ನಂಬರು 4014-21 —ಲೋ. ಬೋ. 397—07—11ರ ಮಕ್ರುಂ 30—10—08ನೆಯದು ಓದಲ್ಪಟ್ಟು ಬೋರ್ಡಿನವರ ವಂದನೆಯೊಡನೆ ರಿಕಾರ್ಡು ಮಾಡಲಾಯಿತು.

6. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕೆಲವರಿಗೆ ಅಮೃತಮಹಲ್ ಹೋರಿಗಳನ್ನು ಕೊಡಿಸಿದ ವಿಷಯದಲ್ಲಿ ತಲ್ಪಿದ ಗವರ್ನಮೆಂಟ್ ಪ್ರೊಸಿಡಿಂಗ್ಸು ನಂಬರು 4409-18—ಲೋ. ಬೋ. 85—8—4ನೆ ಮಕ್ರುಂ 11—11—08ನ್ನು ಓದಲಾಗಿ ರಿಕಾರ್ಡು ಮಾಡಲಾಯಿತು.

7. 1908ನೆ ಸಾಲಿನ ಬಂದು ಡಜನ್ ಮೈಸೂರು ಹೆಲ್ತ್ ಅಲ್ಮನಾಕನ್ನು ಕಳುಹಿಸಿರುವ ವಿಷಯದಲ್ಲಿ ತಲ್ಪಿದ ನಂಬರು 1,743-59ನೆ ಮಕ್ರುಂ 3—11—08ನೆ ಸ್ಯಾನಿಟೆರಿ ಕಮಿಷನರವರ ಲೆಟರು ಓದಲಾಗಿ ರಿಕಾರ್ಡು ಮಾಡಲಾಯಿತು.

8. 2,000 ಪ್ರತಿ ಹೆಲ್ತ್ ಅಲ್ಮನಾಕನ್ನು ಕೊಂಡುಕೊಳ್ಳಬಹುದೆಂತ ಸ್ಯಾಂಕ್ಷನ್ ಮಾಡಿರುವ ಮತ್ತು ಅವುಗಳ ಖರೀದಿ ಮೊಬಲಗಿನಲ್ಲಿ ಡಿಸ್ಟ್ರಿಕ್ಟು ಫಂಡಿನಿಂದ ಕೊಡಬೇಕಾಗುವ ಅಂಕಕ್ಕೆ ಈ ವರುಷದ ಬಡ್ಜಟ್ಟಿನಲ್ಲಿ ಯಾವ ಹೆಡ್ಡಿನಿಂದ ಖರ್ಚು ಮಾಕಬಹುದೆಂಬದನ್ನು ತಿಳಿಸಬೇಕೆಂತ ತಲ್ಪಿದ ನಂಬರು 3655-95—ಸ್ಯಾನಿಟೆರಿ 11—08—12ನೆ ಮಕ್ರುಂ 17-10-08ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ಸದರಿ ಪ್ರತಿಗಳು ಇಲ್ಲಿಗೆ ತಲ್ಪುದಿರುವದರಿಂದಲೂ ಮತ್ತು ಈ ವರುಷ ಪೂರೈಸುತ್ತಾ ಬಂದಿರುವದರಿಂದಲೂ ಸದರಿ ಪ್ರತಿಗಳು ಬೋರ್ಡಿನವರಿಗೆ ಹಾಲಿ ಅವಶ್ಯಕವಿಲ್ಲವೆಂತ ತೀರ್ಮಾನಿಸಲಾಯಿತು.

9. ವ್ಯವಸಾಯದ ಫಂಡಿನ ಅದಕ್ಕೆ ಸಮ್ಮಂಧಪಟ್ಟ ಅಂದಾಜಾಗಳ ವಿಚಾರದಲ್ಲಿ ಯಾವ ರೀತಿ ನಡವಳಿಕೆಯಲ್ಲಿ ತರಬೇಕೆಂಬ ಬಗ್ಗೆ ರೂಲ್ಸು ನಿರ್ಣಯಿಸಿರುವ ನಂಬರು 2086-96—585—07—11ನೆ ಮಕ್ರುಂ 24—9—08ನೆ ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲಾಗಿ ರಿಕಾರ್ಡು ಮಾಡಲಾಯಿತು.

ಎಗ್ಜಿಕ್ಯೂಟಿವ್ ಇಂಜನಿಯರವರಿಂದ ಮಜ್ಕೂರ ಸಾಲಿಗೆ ಪ್ರೋಗ್ರಾಂ ಕೊಟ್ಟಿರುವಂತೆ ಬೋರ್ಡಿನವರಿಗೆ ತಿಳಿಯಬಂದ ದ್ದರಿಂದ ಮುಂದಿನ ವರ್ಷಕ್ಕೆ ಪ್ರೋಗ್ರಾಂ ಮಾಡುವದಾಗಿಯೂ ತಾಲ್ಲೂಕು ಬೋರ್ಡಿನವರು ತಮ್ಮ ಪ್ರೋಗ್ರಾಂ ಗಳನ್ನು ಮುಂದಿನ ಬಡ್ಜಟ್ ಮಿಟಿಂಗಿನಲ್ಲಿ ಚರ್ಚಿಸುವದಕ್ಕೆ ಕಳುಹಿಸಬೇಕೆಂತಲೂ ತೀರ್ಮಾನಿಸಲಾಯಿತು.

10. ಅನವಟ್ಟಿ-ಹಳ್ಳೀ ಬಾರ್ಲೈಗೆ ಆಗತಕ್ಕ ರಿಪೇರಿ ವಿಷಯದಲ್ಲಿ ಕೆಲವು ಸಂಗತಿಗಳನ್ನು ತಿಳಿಸಬೇಕೆಂತ ತಲ್ಪಿದ ನಂಬರು4626—ಲೋ. ಬೋ. 31—07—6ನೆ ಮಕ್ರುಂ 16—11—08ನೆ ಸೆಕ್ರಿಟೆರಿಯವರ ಡಾಕೆಟ್ ಓದಲಾಗಿ, ಸದರಿ ಬಾರ್ಲೈಗೆ ರಿಪೇರಿ ಮಾಡತಕ್ಕದ್ದು ಅರ್ಹವಾಗಿಲ್ಲವಾಗಿ ತಿಳಿಯಬಂದದ್ದರಿಂದ ಸದರಿ ಕಟ್ಟಡವನ್ನು ಮುಸಾಫರಖಾನೆ ಮಾಡುವದನ್ನು ಬಿಟ್ಟು ಬಂದು ಹೊಸ ಮುಸಾಫರಖಾನೆಯನ್ನು ಕಟ್ಟುವದಕ್ಕೆ ಅಂದಾಜು ತಯಾರಿಸಿ ಆಲೋಚನೆ ಬಗ್ಗೆ ಬೋರ್ಡಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

11. ಶಿವಮೊಗ್ಗ-ಎಡೆಹಳ್ಳಿ ರಸ್ತೆಯ ರಿಪೇರಿಗೋಸ್ಕರ 2,000 ರೂಪಾಯಿನ ವರಿಗೆ ಗ್ರಾಂಟ್ ಮೊಬಲಗು ಜಾಸ್ತಿ ಮಾಡಬೇಕೆಂತ ತಲ್ಪಿದ ಶಿವಮೊಗ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ನಂಬರು 1,074ರ ಮಕ್ರುಂ 25-10-08ನೆ ಡಾಕೆಟ್ ಓದಲ್ಪಟ್ಟು, ಬೋರ್ಡಿನವರಲ್ಲಿ ಜಾಸ್ತಿ ಹಣ ಇಲ್ಲದಿರುವದರಿಂದಲೂ ಸದರಿ ರಸ್ತೆಯು ಬಹಳವಾಗಿ ನಾಟಾ ವ್ಯಾಪಾರ ಉಪಯೋಗಿಸುತ್ತಿರುವದರಿಂದಲೂ ಸಹ ಫಾರೆಸ್ಟು ಡಿಪಾರ್ಟುಮೆಂಟಿನ ಬಡ್ಜಟ್ಟಿನಿಂದ 1,500 ಕೊಡುವಂತೆ ಗವರ್ನಮೆಂಟಿಗೆ ಕೇಳಿಕೊಳ್ಳಬೇಕೆಂತಲೂ ಹಾಗೆ ಸದರಿ ಮೊಬಲಗನ್ನು ಕೊಟ್ಟಲ್ಲಿ ಹಾಲಿ ಡಿಸ್ಟ್ರಿಕ್ಟು ಫಂಡು ಅಂದಾಜಾದಲ್ಲಿರುವ 500 ರೂಪಾಯಿಯೂ ಸೇರಿ ಒಟ್ಟು 2,000 ಆಗುತ್ತೆಂತಲೂ ತೀರ್ಮಾನಿಸಲಾಯಿತು.

12. ಶಿವಮೊಗ್ಗ ತಾಲ್ಲೂಕು ಅಂತರಗಂಗೆ ಗ್ರಾಮದಲ್ಲಿ ತೋಡಿಸಿರುವ ಭಾವಿಯ ವಿಷಯದಲ್ಲಿ ತಲ್ಪಿದ ನಂಬರು 4559—ಲೋ. ಬೋ. 26—07—13ರ ಮಕ್ರುಂ 14—11—08ನೆ ಡಾಕೆಟ್ ಓದಲಾಗಿ, ಹಾಲಿ ಭಾವಿಯಲ್ಲಿ 12 ಅಡಿ ನೀರು ಇರುವದಾಗಿಯೂ ಗ್ರಾಮ-ತಾಣಾ ಮತ್ತು ಕೆರೆ ತಕ್ಕಷ್ಟು ದೂರದಲ್ಲಿ ಎತ್ತರ ಜಾಗಾದಲ್ಲಿರುವದಾಗಿಯೂ ರಿಪೋರ್ಟು ಬಂದಿರುವದರಿಂದ ಸದರಿ ಭಾವಿಗೆ ರಿವೆಟ್‌ಮೆಂಟು ಕಟ್ಟಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

13. ಮಜಕೂರು ಸಾಲಿನ ಕೆಲಸ ಪೂರೈಸದಿರುವ ಕೆಲಸಗಳನ್ನು ಪೂರೈಸುವದಕ್ಕೆ ಈ ವರುಷದ ಬಡ್ಜಟ್ಟಿನ ಅಂದಾಜಾದಲ್ಲಿ ಯಾವ ಯಾವ ಹೆಡ್ಡಿನಿಂದ ವದಗಿಸಬೇಕೆಂಬ ವಿಷಯದಲ್ಲಿ ಗವರ್ನಮೆಂಟಿಗೆ ಬರಸಿದ ಪ್ರೆಸಿಡೆಂಟರವರ ನಂಬರು 103ರ ಮಕ್ರುಂ 20—10—08ನೆ ಲೆಟರು ಓದಲಾಗಿ ಜಾಸ್ತಿಯಾಗಿ ಕೊಡಬೇಕೆಂತ ಕೇಳಿರುವ ರೂ. 6,100 ಪೈಕಿ ಸದರಿ ಅಂದಾಜಾಗಳಿಗೆ ಹಣಾ ಕೊಡಬೇಕೆಂತ ತೀರ್ಮಾನಿಸಲಾಯಿತು.

14. ಸಾಗರ ತಾಲ್ಲೂಕು ಮಾಸೂರಿನಿಂದ ಕೆಳದಿಗೆ ಸಂತೆ ಬದಲಾಯಿಸಬೇಕೆಂತ ತಲ್ಪಿದ ನಂಬರು 3729-30-ಲೋ. ಬೋ. 378-07-4ನೆ ಮಕ್ರುಂ 19—10—08ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ತಲ್ಪಿ ರಿಕಾರ್ಡು ಮಾಡಲಾಯಿತು.

15. ಕುಂಸಿ ಸಬ್ ತಾಲ್ಲೂಕಿನ ಹಾರ್ನಹಳ್ಳಿ ಗ್ರಾಮದಲ್ಲಿರುವ ಹಳೇ ಪೋಲೀಸು ಸ್ಟೇಷನನ್ನು ಮುಸಾಫರಖಾನೆಗೋಸ್ಕರ ಉಪಯೋಗಿಸುವ ವಿಷಯದಲ್ಲಿ ತಲ್ಪಿದ ಶಿವಮೊಗ್ಗ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 493ರ ಮಕ್ರುಂ 12—9—08ನೆ ಯಾದಿ ಓದಲಾಗಿ ಸದರಿ ತಾಲ್ಲೂಕು ಬೋರ್ಡಿನ ತೀರ್ಮಾನವನ್ನು ಅನುಮೋದಿಸಬಹುದಾಗಿ ತೀರ್ಮಾನಿಸಲ್ಪಟ್ಟಿತು.

16. ಶಿವಮೊಗ್ಗ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 678ನೆ ಮಕ್ರುಂ 15—10—08ನೆ ಯಾದಿ ಷಿಕಾರಿಪುರದಲ್ಲಿ ಈಗ ಮುಸಾಫರಖಾನೆಯಾಗಿ ಉಪಯೋಗಿಸಿರುವ ಹಳೇ ತಾಲ್ಲೂಕು ಕಛೇರಿಯ ಪಕ್ಕದಲ್ಲಿರುವ 2 ಮನೆಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳತಕ್ಕ ವಿಷಯವಾಗಿಯೂ ಅಥವಾ ಅದೇ ಕಟ್ಟಡವನ್ನು ಮಾಡಿ ಅದಕ್ಕೆ ಬದಲಾಗಿ ಒಂದು ಹೊಸದಾಗಿ ಕಟ್ಟುವ ವಿಷಯದಲ್ಲಿ ತಲ್ಪಿದಕ್ಕೆ ಮುನಿಸಿಪಾಲಿಟಿಯವರು ಕಟ್ಟಡವನ್ನು ಸೇರಿಸಿಕೊಳ್ಳತಕ್ಕ ವಿಚಾರ ಮತ್ತು ಸ್ಥಳ ಮಟ್ಟವಾಡುವದರ ಲಾಗವಾಡುವಿನಲ್ಲಿ ಅರ್ಧ ಭಾರ್ಜನ್ನು ಕೊಡುವದಾದರೆ ಹಣವಿದ್ದ ಭಾಗದಲ್ಲಿ ಬೋರ್ಡಿನವರು ಮಿಕ್ಕ ಅರ್ಧ ಭಾಗವನ್ನು ಕೊಡುವದಾಗಿ ತೀರ್ಮಾನಿಸಲಾಯಿತು.

17. ಶಿರಾಳಕೊಪ್ಪದ ಟ್ರಾವಿಲರ್ಸ್ ಬಂಗ್ಲೆಗೆ ಒಬ್ಬ ದಂಡಿಯನ್ನು ನೇಮಕ ಮಾಡತಕ್ಕ ವಿಷಯದಲ್ಲಿ ಶಿವಮೊಗ್ಗ ಡಿವಿಜ್ಯ ಅಸಿಸ್ಟೆಂಟ್ ಕಮಿಷನರವರಿಂದ ಬಂದ 1908ನೆ ಅಕ್ಟೋಬರು 18ನೆ ತಾರೀಖಿನ 677ನೆ ನಂಬರು ಯಾದಿ ಓದಲಾಗಿ ಮತ್ತೊಬ್ಬ ಹೊಸ ಜವಾನನನ್ನು ನೇಮಕಮಾಡುವದು ಅನವಶ್ಯಕವೆಂತಲೂ ಮತ್ತು ಹಾಲಿ ಈಗ ಇರತಕ್ಕ ಜವಾನನ ಸಂಬಳವನ್ನು 5 ರೂಪಾಯಿನಿಂದ 6 ರೂಪಾಯಿಗೆ ಹೆಚ್ಚಿಸುವ ವಿಷಯ ತಾಲ್ಲೂಕು ಬೋರ್ಡಿನಲ್ಲಿ ಚರ್ಚಿಸಿ ಅದರ ತೀರ್ಮಾನ ಬಂದಮೇಲೆ ಯೋಚನೆ ಮಾಡಲ್ಪಡುತ್ತೆಂತ ತೀರ್ಮಾನಿಸಲಾಯಿತು.

18. ತೀರ್ಥಹಳ್ಳಿ ತಾಲ್ಲೂಕಿನ ಸಬ್ ರಿಜಿಸ್ಟ್ರಾರ್‌ನ್ನು ತಾಲ್ಲೂಕು ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ನೇಮಕ ಮಾಡುವ ವಿಷಯದಲ್ಲಿ ತೀರ್ಥಹಳ್ಳಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ 1908ನೆ ಇಸವಿ ಅಕ್ಟೋಬರ್ 29ನೆ ತಾರೀಖಿನ 831ನೆ ಯಾದಿ ಓದಲಾಗಿ ಈ ವಿಷಯ ಮುಂದಿನ ವಿಾಟಂಗಿನಲ್ಲಿ ಚರ್ಚಿಸಲ್ಪಡುವದಕ್ಕೆ ಇಟ್ಟಿರುತ್ತೆಂತ ತೀರ್ಮಾನಿಸಲಾಯಿತು.

19. ಕಾಲಿ ದುರ್ಗದಲ್ಲಿ ಬಂದು ದೊಡ್ಡಿ ವಿಸ್ತಾರ ಮಾಡತಕ್ಕ ವಿಷಯದಲ್ಲಿ ತೀರ್ಥಹಳ್ಳಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ 1908ನೆ ನವಂಬರ್ 23ನೆ ತಾರೀಖಿನ 1042ನೆ ಯಾದಿ ಓದಲಾಗಿ ಅದೇಹಳ್ಳಿಯಲ್ಲಿ ವಾಸಮಾಡತಕ್ಕ ಜನಗಳು ತಮ್ಮ ಸ್ವಂತ ಖರ್ಚಿನಿಂದ ದೊಡ್ಡಿ ಕಟ್ಟುವದಲ್ಲಿ ಮುಂಜೂರು ಮಾಡಬಹುದೆಂತ ತೀರ್ಮಾನಿಸಲಾಯಿತು.

20. (a) ಈ ಕೆಳಗಿನ ಅಂದಾಜಾಗಳು ಓದಲ್ಪಟ್ಟವು.

ತಾಲ್ಲೂಕು	ಹೆಸರು	ಮೊಬಲಗು	ಷರಾ
		ರೂ.	
ಕುಂಸಿ ...	ಹಾರ್ನಹಳ್ಳಿ ಯೂನಿಯನ್ನಿನಲ್ಲಿ ರಸ್ತೆ ರಿಪೇರಿ.	50	ಮಂಜೂರ್ಮಾಡಿದೆ.
	ಹಾರ್ನಹಳ್ಳಿ ಯೂನಿಯರ್ಗೆ ದೀಪದ ಕಂಭ ಮತ್ತು ಲಾಂದರಗಳು.	54	ಡಿಟೋ
ಹೊನ್ನಾಳಿ ...	ಸಾಸ್ವೆಹಳ್ಳಿ ದೊಡ್ಡಿ ...	178	ಹಳೇದೊಡ್ಡಿಯು 80 ರೂಪಾಯಿ ಲಾಗುವ ಡಿನಿಂದ ರಿಪೇರಿ ಮಾಡಬಹುದಾಗಿ ಹೇಳುವದ್ದರಿಂದ ಈ ಮೊಬಲಗು ಮುಂಜೂರ್ಮಾಡಿದಲ್ಲಿ ಒಟ್ಟು 98 ರೂಪಾಯಿ ಮುಂಜೂರ್ಮಾಡಿದಂತೆ ಆಗುತ್ತೆ.
	ಕುಲಂಬಿ ಬಾವಿಗೆ ಸುತ್ತು ಗೋಡೆ ಕಟ್ಟುವದಕ್ಕೆ.	120	ಬಿಟ್ಟಿದೆ. ಅಮಲ್ದಾರು, ಆಸ್ಥೀಕರು ಈ ಬಾವಿ ವಿಷಯದಲ್ಲಿ ಆತುರರಲ್ಲವಾದ್ದರಿಂದಲೂ ಈ ವರ್ಷ ಈ ಕೆಲಸ ತೆಗೆದುಕೊಳ್ಳಲು ಆಗುವದಿಲ್ಲ.
	ಚನ್ನಮೂಂಬಾಪುರದ ಬಾವಿ ...	435	ಮಂಜೂರ್ಮಾಡಿದೆ.
	ಚಿನ್ನಿಕಟ್ಟೆ ಬಾವಿ ...	650	ಡಿಟೋ
ಶಿಕಾರಿಪುರ ...	ಚಿಕ್ಕಜಂಬೂರ ಬಾವಿ ...	1,110	ಡಿಟೋ
ಹೊನ್ನಾಳಿ ...	ಸೂಳಂಗದ ಮುಸಾಫರ್‌ಖಾನೆ ರಿಪೇರಿ ...	220	ಮಂಜೂರ್ಮಾಡಿರುವ ಹಣದಿಂದ ಕೆಲಸ ಪ್ರಾರಂಭಿಸಬಹುದು.
ತೀರ್ಥಹಳ್ಳಿ ...	ಆಗುಂಬೆ ಡಿಟೋ ...	154	ಮಾಲೂರು ಮುಸಾಫರ್‌ಖಾನೆಗೆ ಕೊಟ್ಟ ಮೊಬಲಗಿನಿಂದ ಮಾಲೂರು, ತೀರ್ಥಹಳ್ಳಿ, ಆಗುಂಬಿ ಮುಸಾಫರ್‌ಖಾನೆಗೆ ಹಂಚಬೇಕೆಂತ ತೀರ್ಮಾನಿಸಲಾಯಿತು.
ಚನ್ನಗಿರಿ ...	ಹೊದಿಗ್ಗೆರೆ ಯೂನಿಯನ್ನಿನಲ್ಲಿ ಹೊಸ ರಸ್ತೆ.	50	ಮಂಜೂರ್ಮಾಡಿದೆ.
	ಪಾಂಡವಮಟ್ಟಿ ಡಿಟೋ ...	240	ಡಿಟೋ
	ತಾವರೆಕೆರೆ ಡಿಟೋ ...	100	ಡಿಟೋ
	ದುರ್ಗಿಗೆರೆ ಡಿಟೋ ...	50	ಡಿಟೋ

20 (b). ಈ ಕೆಳಗಿನ ಅಂದಾಜಾಗಳು ಬೋರ್ಡಿನವರ ಒಪ್ಪಿಗೆ ನಿರೀಕ್ಷಣೆಯಿಂದ ಪ್ರೆಸಿಡೆಂಟರವರಿಂದ ಮಾಡಲ್ಪಟ್ಟಿದ್ದವು ಅನುಮೋದಿಸಲ್ಪಟ್ಟವು :—

ತಾಲ್ಲೂಕು	ಹೆಸರು	ಮೊಬಲಗು	ಷರಾ
		ರೂ.	
ಸೊರಬ ...	ಚಂದ್ರಗುತ್ತಿಯಲ್ಲಿ ಆನಂದ ಮಠದ ಹತ್ತರವಿರುವ ಬಾವಿ ರಿಪೇರಿ ...	60	
ಡಿಟೋ ...	ಸೊರಬದ ಮುಸಾಫರ್‌ಖಾನೆ	50	
ಸಾಗರ ...	ತಾಳಗುಪ್ಪ ಡಿಟೋ	50	
ಕುಂಸಿ ...	ಕುಂಸಿ ಡಿಟೋ	49	
ಸೊರಬ ...	ಉಳವಿ-ಕಡಸೂರು ರಸ್ತೆ ರಿಪೇರಿ	120	
	ಸೊರಬ-ಚಂದ್ರಗುತ್ತಿ ಗಾಡಿ ದಾರಿ	180	

21. ಗ್ರಾಮಾಂತರಗಳ ಆರೋಗ್ಯಸ್ಥಿತಿ ಮತು. ಇತರ ಕಾಮುಗಾರಿಗೋಸ್ಕರವಾಗಿ ಡಿಸ್ಟ್ರಿಕ್ಟು ಫಂಡ್ ಹಣದಿಂದ 8,000 ರೂಪಾಯಿಗಳನ್ನು ಮಂಜೂರ್ಮಾಡತಕ್ಕ ವಿಷಯವಾಗಿ ಕೆಲವು ಸಂಗತಿಗಳನ್ನು ತಿಳಿಸಬೇಕೆಂತ 1908ನೆ ನವಂಬರ 4ನೆ ತಾರೀಖಿನ 4179—ಲೋ. ಬೋ. 82-08-3ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ದುರ್ಭಿಕ್ಷಕಾಲದಿಂದ ಕಂದಾಯವನ್ನು ಕಡಿವೇ ಮಾಡುವ ಸಂದರ್ಭವಿರುವದರಿಂದ ಪ್ರೆಸಿಡೆಂಟರವರಿಂದ ತೋರಿಸಲ್ಪಟ್ಟ ಹೆಚ್ಚಿಗೆ ತಿಳಿಸಿಂದ 6,100 ರೂಪಾಯಿಯನ್ನು ಸ್ಯಾಂಕ್ಷನ್ ಮಾಡುವದಕ್ಕೆ ಗವರ್ನಮೆಂಟಿನವರನ್ನು ಕೇಳಿಕೊಳ್ಳಬೇಕೆಂತಲೂ ತಾಲ್ಲೂಕುಗಳಿಂದ ಕಳುಹಿಸಿರುವ ಅಂದಾಜಾಗಳನ್ನು ಸ್ಯಾಂಕ್ಷನ್ ಖಚ್ಚು ಗವರ್ನಮೆಂಟಿಗೆ ಕಳುಹಿಸಬೇಕೆಂತಲೂ ಇದೇ ಮೊಬಲಗಿನಿಂದ ಇನ್ ಕಂಪ್ಲೀಟ್ ಕೆಲಸಗಳಿಗೆ ಮೊಬಲಗು ಕೊಡಬೇಕೆಂತಲೂ ತೀರ್ಮಾನಿಸಲಾಯಿತು.

22. ಶಿಕಾರಿಪುರ ತಾಲ್ಲೂಕು ತಿರಳಿಕೊಪ್ಪದ ಯೂನಿಯರ್ಜನಲ್ಲಿರುವ 4 ಗಂಡು ಝೂಡಮಾಲಿಗಳಿಗೆ ಸಂಬಳ ಜಾಸ್ತಿ ಮಾಡತಕ್ಕ ವಿಷಯದಲ್ಲಿ ತಿರಸ್ಕಾರ ಮಾಡಿರುವ ನಂಬರು 4796—ಲೋ. ಬೋ. 140-08-2ನೆ ಮುರ್ತುಂ 21-11-08ನ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಗಿ, ಸದ್ಯಕ್ಕೆ ಗ್ರೇಡ್ ಅಲೋವೆನ್ಸು ಸದರಿ ಝೂಡುಮಾಲಿಗಳಿಗೆ ಕೊಡೋಣದರಿಂದಲೂ ಸ್ಥಳಿಕರು ಝೂಡಮಾಲಿ ಕೆಲಸ ಮಾಡುವದಕ್ಕೆ ತಿರಸ್ಕರಿಸುತ್ತಾರೆಂತಲೂ, ಕೆಲಸ ಮಾಡತಕ್ಕವರನ್ನು ಬೇರೆ ಸ್ಥಳದಿಂದ ಕರೆಸಬೇಕೆಂತಲೂ ತಾಲ್ಲೂಕು ಅಮಲ್ದಾರರು ಹೇಳುವದರಿಂದ ಮುಂದಿನ ವರುಷದ ಬಜ್ಜೆಟ್ಟಿನಲ್ಲಿ ರಿಪೋರ್ಟು ಮಾಡಬೇಕೆಂತಲೂ ತೀರ್ಮಾನಿಸಲಾಯಿತು.

23. ಶ್ರೀವರ್ಮ ಮಹಾರಾಜ್ಞೆಯವರ ಪ್ರಸಿದ್ಧಪತ್ರಿಕೆಯ 50ನೆ ವರುಷ ವರ್ಧಂತಿಯ ದಿನ ಖರ್ಚಿಗೋಸ್ಕರ ಡಿಸ್ಟ್ರಿಕ್ಟು ಫಂಡಿನಿಂದ ಈಟ್ರಬ್ಯೂಷ್ ಕೊಡುವ ವಿಷಯದಲ್ಲಿ ಡಿಸ್ಟ್ರಿಕ್ಟು ಬೋರ್ಡಿನ ತೀರ್ಮಾನವನ್ನು ತಿಳಿಸಬೇಕೆಂತ ತಲ್ಪಿದ ನಂಬರು 4919-26—ಲೋ. ಬೋ. 117-08ನೆ ಮುರ್ತುಂ 25—11—08ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ಸದರಿ ಖರ್ಚನ್ನು ಕೊಡುವದಕ್ಕೆ ಬೋರ್ಡಿನವರು ಒಪ್ಪಿಕೊಂಡಿರುವದಾಗಿ ತೀರ್ಮಾನಿಸಲಾಯಿತು.

24. 1908ನೆ ಇಸವಿ ನವಂಬರು ತಾರೀಖು 15 ರಿಂದ ಗೆರಸೊಪ್ಪಾ ಜಲಪಾತಕ್ಕೆ ಹೋಗತಕ್ಕ ನದಿಯನ್ನು ಡಿಸ್ಟ್ರಿಕ್ಟು ಬೋರ್ಡು ಸ್ವಾಧೀನ ಇಟ್ಟುಕೊಳ್ಳುವದಕ್ಕೂ ಮತು. ಅಲ್ಲಿರುವ ರಸ್ತೆ ರಿಪೇರಿ ಮುಂತಾದ ಖರ್ಚುಗಳಿಗೆ ಪ್ರೊವಿಷಿಯಲ್ ಫಂಡಿನಿಂದ ಹಣ ವದಗಿಸತಕ್ಕ ವಿಷಯದಲ್ಲಿ ತಲ್ಪಿದ ನಂಬರು 5131-40—ಲೋ. ಬೋ. 343-07-4ನೆ ಮುರ್ತುಂ 30—11—08ನ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲ್ಪಟ್ಟು ರಿಕಾರ್ಡು ಮಾಡಲಾಯಿತು.

25. ಪ್ರೆಸಿಡೆಂಟರವರ ಆಫೀಸಿನಲ್ಲಿ 1908ನೆ ಸಾಲಿನ ಹೆಲ್ತ್ ಆಲ್ಮನಕ್‌ನ ಬಂದು ಪ್ರತಿಯನ್ನು ರಿಕಾರ್ಡಿನಲ್ಲಿಡುವದಕ್ಕೆ ಕಳುಹಿಸಿರುತ್ತೆಂತ ತಲ್ಪಿದ ಸ್ಯಾನಿಟೆರಿ ಕಮಿಷನರವರ ನಂಬರು 2000 ಮುರ್ತುಂ 18—11—08ನೆ ಡಾಕೆಟ್ ಓದಲಾಗಿ, ರಿಕಾರ್ಡು ಮಾಡಲಾಯಿತು, ಮತ್ತು ಈ ವರುಷವಾಗುತ್ತಾ ಬಂದದ್ದರಿಂದ ಸದರಿ ಪ್ರತಿಗಳು ಅವಶ್ಯಕವಿಲ್ಲವೆಂತ ತೀರ್ಮಾನಿಸಲಾಯಿತು.

ಕೆ. ಚಾಂಡಿ, ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 4ನೆ ಜನವರಿ 1909.

1. ಕಂದಾಯದ ಬಾಕೀದಾರರಾದ ಬಾಳೂರು ಗ್ರಾಮದ ಪುಂಕಾಲು ಸರಸ್ವತಮ್ಮನಿಂದ ಬರಬೇಕಾದ ಜಮೀ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಬಾಳೂರು ಗ್ರಾಮದಲ್ಲಿ 1909ನೆ ಫೆಬ್ರವರಿ 6ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಬಾಕಿ ತಪಶೀಲನ್ನು 1909ನೆ ಇಸವಿ ಜನವರಿ 14ನೆ ಮುರ್ತುಂ ಮೈಸೂರ್ ಗೆಜೆಟಿನ 2ನೆ ಭಾಗದ 22ನೆ ನಂಬರ್ ಪೇಜಿನಿಂದ ತಿಳಿಯಬೇಕು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಫೀನಾ ಜಮೀನಿನ ಹೆಸರು	ಖುಷ್ಕಿ ತರಿ ಅಫೀನಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಅಕಾರ. ರೂ.	ಆ.	ಅಂದಾಜು ಕಿಮ್ಮತ್ತು. ರೂ	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜಪ್ತೀಕಾದ ಜೋಡಿ ಯಾ ಕಾಯಂ ಗುತ್ತಾ ಪೊಲಬುಗಳು. ರೂ.	ಸರ್ಕಾರಕ್ಕೆ ಬರಬೇಕಾದ ನೋಟೀಸು ಜಾರಿ ಮಾಡಿದ ಖರ್ಚು ಸಹಿತವಾದ ಬಾಕಿ ಪೊಲಬುಗಳು. ರೂ.	ಆ.	ಪೈ.
ಮೂಡಿಗೆರೆ	ಬಾಳೂರು	ಬಾಳೂರು	ಪುಂಕಾಲು ಸರಸ್ವತಮ್ಮನ್ನು ಕೋಂ ಗಣೇಶರಾವ್	ಸರ್ವೆ ನಂ. 27—ಪಶ್ಚಿಮದಲ್ಲಿ ಮುತ್ತಿ ಸರ್ವೆ ನಂ. 27—ಪೂರ್ವದಲ್ಲಿ ಮುತ್ತಿ ಅಂದಾಜು ರೂ. 211				ಎ.	ಗು.	ರೂ.	ಆ.					
						25	ಕಾಫಿ ...	6	29	6	8	60			64	3	6	ಐಗ
						26	ಖುಷ್ಕಿ ...	0	14	0	4	1			1	8	0	ನೊ
						27	ಕಾಫಿ ...	0	37	1	0	10						
						28	ಡಿಟೋ ...	1	6	1	12	20	...		65	11	6	
						29-2	ಡಿಟೋ ...	7	9	7	4	75			ಹರಾಜು ಜೇಟಿನ ವರಿಗಿನ ಬಡ್ಡಿ ಬರಬೇಕು.			
						32	ತರಿ ...	1	37	4	8	5						
						33	ಡಿಟೋ ...	0	25	1	8	2						
						34	ಕಾಫಿ ...	30	30	31	0	320						
						8	ನಂಬರುಗಳು	49	27	53	12							

ಸಿ. ರಂಗನಾಥರಾವ್ ಸಾಹಿಬ್, ಫಾರ್ ಡೆಪ್ಯುಟಿ ಕವಿಾಷನರ್.